A Jain Institution
Sitadevi Ratanchand Nahar
ADARSH EVENING COLLEGE
(Affiliated to Bengaluru City University)

CAMPUS ಕಲರವ

# ಸಾಮಾನ್ಯ ಪ್ರಜ್ಞೆಯ ಕೊರತೆ

ಮನುಷ್ಯ ಅತ್ಯಂತ ಬುದ್ಧಿವಂತ ಪ್ರಾಣಿ. ನಾಗರೀಕತೆ ಮನುಷ್ಯ ಮತ್ತು ಪ್ರಾಣಿ ಪ್ರಪಂಚದ ನಡುವೆ ಅಂತರವನ್ನೂ ಹೆಚ್ಚಿಸಿದೆ. ಮನುಷ್ಯ ಸಾಧಿಸಿರುವುದು ಅನೇಕ. ಆದರೆ ಸಾಧಿಸಬೇಕಾಗಿರುವುದು ಬಹಳಷ್ಟಿದೆ. ಮನುಷ್ಯ ಹಕ್ಕಿಯ ಹಾಗೆ ಹಾರಬಲ್ಲ ಹಾಗೂ ಮೀನಿನ ಹಾಗೆ ಈಜಬಲ್ಲ. ಆದರೆ ಮನುಷ್ಯ ಮೊದಲು ಮಾನವನಾಗಿರುವುದನ್ನು ಕಲಿಯಬೇಕಿದೆ.

ಮನುಷ್ಯರೆಲ್ಲರೂ ಸಮಾನರು. ಹಾಗಂತ ನಾವು ಎಲ್ಲಾ ವಿಷಯಗಳಲ್ಲಿಯೂ ಸಮಾನತೆಯನ್ನು ಕಾಣಲು ಸಾಧ್ಯವಿಲ್ಲ. ಕೆಲವು ಗುಣಗಳು ಪ್ರಕೃತಿದತ್ತ ಅಥವಾ ದೈವದತ್ತ ಆದರೆ ನಾವು ರೂಢಿಸಿಕೊಳ್ಳುವುದು, ಕಲಿಯುವುದು ಹಾಗೂ ಕಲಿಸುವುದು ಅನೇಕ ಅಂಶಗಳು. ಬುದ್ಧಿಮಾಂದ್ಯರು, ಬುದ್ಧಿಸ್ವಾಸ್ಥ್ಯವಿಲ್ಲದವರು ಮತ್ತು ಮಕ್ಕಳನ್ನು ಹೊರತುಪಡಿಸಿ ಉಳಿದೆಲ್ಲ ವ್ಯಕ್ತಿಗಳಿಂದ ನಾಗರೀಕ ಸಮಾಜ ಬಯಸುವುದು ಸಾಮಾನ್ಯ ಪ್ರಜ್ಞೆ.

ನಮ್ಮ ಸಮಾಜದ ದೊಡ್ಡ ದುರಂತವೆಂದರೆ ಸಾಮಾನ್ಯ ಪ್ರಜ್ಞೆಯ ಕೊರತೆ. ಇದು ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಮೊದಲಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಎದ್ದು ಕಾಣುತ್ತದೆ. ನಮ್ಮ ದೈನಂದಿನ ವ್ಯವಹಾರಗಳನ್ನು ಮಾಡುವಾಗ ನಾವು ಅನೇಕ ಸಂಗತಿಗಳನ್ನೂ ಗಮನಿಸಬಹುದು.

ಒಂದು ಮಗುವನ್ನು ಬೆಳೆಸುವಾಗ ತಂದೆ-ತಾಯಿಂದಿರು ಅನೇಕ ಅಂಶಗಳನ್ನು ಗಮನಿಸುವುದಿಲ್ಲ. ಒಬ್ಬ ಮುಗ್ಧ ಮಗುವನ್ನು ಶಿಕ್ಷಿಸುವ ಪೋಷಕರು ಅದು ಬೆಳೆದು ದೊಡ್ಡದಾದಾಗ ಸರಿ ಮತ್ತು ತಪ್ಪುಗಳ ಬಗ್ಗೆ ಅರಿವು ಮೂಡಿಸುವುದೇ ಇಲ್ಲ. ಮಗುವಿಗೆ ಆಹಾರವನ್ನು ಬಲವಂತವಾಗಿ ತಿನ್ನಿಸುವವರಿದ್ದಾರೆ. ಆದರೆ ಅದು ನಿಜವಾಗಿ ಹಸಿದಾಗ ಅದನ್ನು ಗಮನಿಸುವುದೇ ಇಲ್ಲ.

ಇಂದಿನ ಅನೇಕ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಪ್ರಜ್ಞೆಯೇ ಇರುವುದಿಲ್ಲ. ಅವರು ಶಾಲೆ ಅಥವಾ ಮಹಾವಿದ್ಯಾಲಯಗಳಿಗೆ ಹೋಗುವ ಉದ್ದೇಶದ ಅರಿವೇ ಇರುವುದಿಲ್ಲ. ತರಗತಿಗಳಿಗೆ ಅಡ್ಡಿಪಡಿಸದೇ ಕಲಿಯುವ ವಾತಾವರಣವನ್ನು ಕಾಪಾಡಿಕೊಂಡು ಉತ್ತಮ ವಿದ್ಯಾರ್ಥಿಗಳಾಗಬೇಕೆಂಬ ಪ್ರಜ್ಞೆಯೇ ಇಲ್ಲವಾಗಿದೆ. ತಮ್ಮ ಹಕ್ಕುಗಳ ಬಗ್ಗೆ ಸದಾ ಜಾಗೃತರಾಗಿರುವ ವಿದ್ಯಾರ್ಥಿಗಳು ತಮ್ಮ ಕರ್ತವ್ಯಗಳನ್ನು ನಿರ್ಲಕ್ಷಿಸುತ್ತಿದ್ದಾರೆ.

ಬ್ಯಾಂಕುಗಳು ಆರ್ಥಿಕ ಚಟುವಟಿಕೆಗಳ ಕೇಂದ್ರಗಳಾಗಿವೆ. ಇವುಗಳಲ್ಲಿ ಕೆಲಸ ಮಾಡುವ ಅನೇಕ ನೌಕರರು ನೋಟುಗಳ ಮೇಲೆ ಬರೆಯುವ ಕೆಟ್ಟ ಅಭ್ಯಾಸವನ್ನೂ ಬೆಳೆಸಿಕೊಂಡಿದ್ದಾರೆ. ಇಂತಹ ದೃಶ್ಯಗಳನ್ನು ನಾವು ಕ್ಯಾಶ್ ಕೌಂಟರ್‌ಗಳಲ್ಲೂ ಕಾಣುತ್ತೇವೆ. ಬ್ಯಾಂಕಿನಲ್ಲಿ ಭರ್ತಿಮಾಡಬೇಕಾದ ಫಾರಂಗಳಲ್ಲಿ ಬೇಡದ ಅನೇಕ ಕಾಲಂಗಳಿರುತ್ತವೆ. ಆದರೆ ವಿಳಾಸ ಬರೆಯುವ ಜಾಗದಲ್ಲಿ ಸ್ಥಳವೇ ಸಾಕಷ್ಟಿರುವುದಿಲ್ಲ. ಬ್ಯಾಂಕುಗಳಿಗೆ ಬರುವ ಗ್ರಾಹಕರನೇಕರು ಲೇಖನಿಯನ್ನೂ ತರುವುದಿಲ್ಲ.

ಸಂಚಾರಿ ನಿಯಮಗಳನ್ನು ಪಾಲಿಸದೇ ಇರುವುದು ಸರ್ವೇ ಸಾಮಾನ್ಯವಾಗಿದೆ. "ಇಂಡಿಕೇಟರ್"ಗಳನ್ನು ಬಳಸದೇ ಇದ್ದರೆ ಅಥವಾ ಕೈಯನ್ನೂ ತೋರಿಸದೇ ತಿರುಗಿದರೆ ಹಿಂದೆ ಬರುವ ವಾಹನ ಚಾಲಕರಿಗೆ ತೊಂದರೆಯಾಗುತ್ತದೆ ಎಂಬ ಪ್ರಜ್ಞೆಯೇ ಅನೇಕರಿಗೆ ಇರುವುದಿಲ್ಲ. ವಾಹನ ದಟ್ಟಣೆ ಇರುವಲ್ಲಿ ಜೋರಾಗಿ ವಾಹನವನ್ನು ಚಲಾಯಿಸುವವರು, 'ಒನ್ ವೇ'ಯಲ್ಲಿ ವಿರುದ್ಧ ದಿಕ್ಕಿನಿಂದ ಬರುವವರು ಮತ್ತು ರಸ್ತೆಗಳು ಇರುವುದೆಲ್ಲ ತಮಗೆ ಮಾತ್ರ ಎಂದುಕೊಂಡಿರುವ ಚಾಲಕರು ಹಲವಾರು ಮಂದಿ ಪಾದಚಾರಿಗಳನ್ನು ಅನೇಕರು ನಿರ್ಲಕ್ಷಿಸುತ್ತಾರೆ. ಇನ್ನು ಕುಡಿದು ವಾಹನಗಳನ್ನು ಚಲಾಯಿಸುವವರು ಕಾಣಸಿಗುತ್ತಾರೆ.

ವಸ್ತುಗಳನ್ನು ಎರವಲು ಪಡೆಯುವುದು ಸಾಮಾನ್ಯ, ಆದರೆ ಅವುಗಳನ್ನು ಸಕಾಲಕ್ಕೆ ಹಿಂದಿರುಗಿಸಬೇಕೆಂಬ ಪರಿಜ್ಞಾನವೇ ಅನೇಕರಿಗಿರುವುದಿಲ್ಲ. ಇದೇ ರೀತಿ ಹಣವನ್ನು ಪಡೆದಾಗಲೂ ವರ್ತಿಸುತ್ತಾರೆ. ತಮ್ಮ ಬಳಿ ಹಣವಿದ್ದಾಗಲೂ ಸಹ ಕಷ್ಟದ ಕಾಲದಲ್ಲಿ ಸಹಾಯ ಮಾಡಿದವರಿಗೆ ಹಣವನ್ನು ಹಿಂದಿರುಗಿಸಿ ಕೃತಜ್ಞತೆ ಸಲ್ಲಿಸದೇ ಇರುವವರು ಅನೇಕರು. ಇದರಿಂದ ಸಹಾಯ ಹಸ್ತವನ್ನು ಚಾಚುವವರು ಕಡಿಮೆಯಾಗುತ್ತಿದ್ದಾರೆ.

ಹೀಗೆ 'Explain' ಮಾಡುತ್ತಾ ಹೋದರೆ 'Campus Kalarava'ದ ಪುಟಗಳೇ ಸಾಲದು. ಆದ್ದರಿಂದ ಕೆಲವು ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಬೆಂಗಳೂರಿನ ರೈಲು ನಿಲ್ದಾಣಕ್ಕೆ ಹೋದರೆ ಪ್ರಯಾಣಿಕರ ಅನುಕೂಲಕ್ಕೆ ಅನೇಕ ಟಿಕೆಟ್ ಕೌಂಟರ್‌ಗಳಿವೆ. ಆದರೆ ಎಲ್ಲ ಕೌಂಟರ್‌ಗಳಲ್ಲೂ ಎಲ್ಲಾ ರೈಲುಗಳ ಟಿಕೆಟ್‌ಗಳು ದೊರಕುವುದರಿಂದ ಅನೇಕರಿಗೆ ತಾವು ಪ್ರಯಾಣ ಮಾಡಬೇಕಾದ ರೈಲು ಹೊರಡುವ ಸಮಯವಾದರೂ ಟಿಕೆಟ್‌ಗಳು ದೊರಕುವುದಿಲ್ಲ. ಬಸ್ ನಿಲ್ದಾಣಗಳಲ್ಲಿ ಮೂತ್ರಾಲಯಗಳಿದ್ದರೂ ಅನೇಕರು ನಿಲ್ದಾಣಗಳ ಆಸು-ಪಾಸಿನಲ್ಲಿ ಮೂತ್ರವಿಸರ್ಜಿಸುತ್ತಾರೆ. ಹಾಗೆಯೇ ಕೆಲವು ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಸ್ವಚ್ಛವಾಗಿರಿಸಬೇಕೆಂದು ಅಧಿಕಾರಿಗಳಿಗೆ ಅನ್ನಿಸುವುದೇ ಇಲ್ಲ. ಇವುಗಳನ್ನು ಉಪಯೋಗಿಸುವವರನೇಕರು ಸ್ವಚ್ಛತೆಯನ್ನು ಕಾಪಾಡುವುದಿಲ್ಲ. ಒಬ್ಬ ಬೈಕ್ ಸವಾರನ ದಾಖಲೆಗಳೆಲ್ಲವನ್ನು ಪರಿಶೀಲಿಸುವ ಸಂಚಾರಿ ಆರಕ್ಷಕರು ದಿನವೆಲ್ಲಾ ಕಾರ್ಖಾನೆಗಳಂತೆ ಹೊಗೆ ಉಗುಳುವ ಆಟೋಗಳ ಪರವಾನಗಿ ರದ್ದುಗೊಳಿಸುವುದಿಲ್ಲ. ಸಣ್ಣ ಪುಟ್ಟ ಸಮಾರಂಭಗಳಿಗೂ ತಾವೇ ಹೋಗಬೇಕೆಂಬ ರಾಜಕಾರಣಿಗಳು ಸರ್ಕಾರಿ ಹಣ ವ್ಯಯಮಾಡುತ್ತಾರೆ. ರಸ್ತೆಗಳ ಸ್ಥಿತಿ ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ ಸಿಗರೇಟ್ ಉತ್ಪಾದನೆಗೆ ಪರವಾನಗಿ ಕೊಡುವ ಸರ್ಕಾರವೇ ಪೊಟ್ಟಣಗಳ ಮೇಲೆ ಶಾಸನ ವಿಧಿಸಿದೆ. "ಎಚ್ಚರಿಕೆ ಸಿಗರೇಟ್ ಸೇವನೆ ಆರೋಗ್ಯಕ್ಕೆ ಹಾನಿಕರ" ಎಂದು ಮುದ್ರಿಸುತ್ತದೆ.

ಹೀಗೆ ನಾವು ಗಮನಿಸುತ್ತಾ ಹೋದರೆ ಅನೇಕ ಅಂಶಗಳು ಕಾಣಸಿಗುತ್ತವೆ. ನಮ್ಮ ದೈನಂದಿನ ಬದುಕಿನಲ್ಲಿ ಎದುರಾಗುವ ಅನೇಕ ಸಮಸ್ಯೆಗಳಿಗೆ ವಿದ್ಯಾವಂತರೇ ಕಾರಣ. ಇದು ನಾವು ಶಿಕ್ಷಣದ ಮೌಲ್ಯದ ಬಗ್ಗೆ ಪ್ರಶ್ನಿಸುವಂತೆ ಮಾಡುತ್ತದೆ. ಬೇರೆಯವರಿಂದ ತಮಗೆ ತೊಂದರೆಯಾದಾಗ ತಕ್ಷಣ ಪ್ರತಿಕ್ರಿಯಿಸುವವರು ತಮ್ಮಿಂದ ಬೇರೆಯವರಿಗೆ ತೊಂದರೆ ಆಗದ ಹಾಗೆ ಏಕೆ ನಡೆದುಕೊಳ್ಳುವುದಿಲ್ಲ? Common sense is the most uncommon commodity in the world ಎಂಬ ಒಬ್ಬ ಚಿಂತಕನ ಉಕ್ತಿ ಇಲ್ಲಿ ಪ್ರಸ್ತುತವಲ್ಲವೆ?

**ಪ್ರೊ. ಸತೀಶ್. ಎಂ.ಡಿ, ಆಂಗ್ಲಭಾಷಾ ಉಪನ್ಯಾಸಕರು.**

# ಲೋಕ ಮಾನ್ಯ ಗಣಪತಿ

ಶ್ರಾವಣಮಾಸ ಬಂತೆಂದರೆ ಸಾಕು,ಸಾಲು ಸಾಲು ಹಬ್ಬಗಳು. ಅದರಲ್ಲೂ ಭಾದ್ರಪದ ಮಾಸದ ಗಣಪತಿ ಹಬ್ಬವೆಂದರೆ ಎಲ್ಲೆಲ್ಲೂ ಸಂಭ್ರಮ,ಸಡಗರ. ಭಾರತದಾದ್ಯಂತ ವಿಜೃಂಭಣೆಯಿಂದ, ಸಡಗರದಿಂದ ಆಚರಿಸುವ ಹಬ್ಬಗಳಲ್ಲಿ ಅಗ್ರಸ್ಥಾನ ಗಣಪತಿ ಹಬ್ಬದ್ದೆಂದರೆ ತಪ್ಪಾಗಲಾರದು.

ಗಣಪತಿ ಎಂದಕೂಡಲೆ  ಕೆಲವರಿಗೆ ಭಕ್ತಿ,ಕೆಲವರಿಗೆ ಸ್ನೇಹಿತನ ಭಾವನೆ,ಕೆಲವರಿಗೆ ಹಿರಿಯಣ್ಣ ,ಮಕ್ಕಳಿಗಂತೂ ಅಚ್ಚುಮೆಚ್ಚಿನ ಒಡನಾಡಿಯ ಭಾವನೆ. ದೇಶಾದ್ಯಂತ ವಿವಿಧ ರೂಪಗಳಲ್ಲಿ,ವೇಷದಲ್ಲಿ ,ಆಕಾರಗಳಲ್ಲಿ ಆಹ್ವಾನಿಸಿ,ಪೂಜಿಸಿ,ವಿಸರ್ಜನೆ ಮಾಡುವುದು ವಾಡಿಕೆ. ಈ ಆಚರಣೆಯು ಕೆಲವೆಡೆ ೫ದಿನ,೭ ದಿನ,೧೦ ದಿನಗಳ ತನಕ ನಡೆಯುತ್ತದೆ.ಈ ಸಂಧರ್ಭದಲ್ಲಿ ಪೂಜೆ ಮಾತ್ರವಲ್ಲದೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತದೆ.

ಸಾಮಾನ್ಯವಾಗಿ ಹಬ್ಬ,ಪೂಜೆ,ವ್ರತ ಇತ್ಯಾದಿಗಳು ಮನೆಯಲ್ಲಿ,ಇಲ್ಲ ಮಠಮಂದಿರಗಳಲ್ಲಿ ಆಚರಿಸುವುದನ್ನು ಕಾಣುತ್ತೇವೆ. ಆದರೆ ಈ ಗಣಪತಿಹಬ್ಬವನ್ನು ಮನೆ,ಮಂದಿರಗಳಲ್ಲದೆ ಊರಿನ ಬೀದಿಬೀದಿಗಳಲ್ಲಿ,ಏರಿ ಕೇರಿಗಳಲ್ಲಿ ಆಚರಿಸುತ್ತಾರೆ.ಇದು ಸಂಪ್ರದಾಯವೋ,ಆಚರಣೆಯ ವಿಧಾನವೋ ಎಂದು ಯೋಚಿಸಿದರೆ ಸಿಗುವ ಉತ್ತರವೇ ಬೇರೆ.

ಅದು ಸುಮಾರು ೧೮೯೩ನೇ ಇಸವಿ.ಭಾರತ ದೇಶವು ಬ್ರಿಟಿಷರ ಆಳ್ವಿಕೆಯಲ್ಲಿ ನಲುಗುತ್ತಿದ್ದ ಸಮಯ.ಬ್ರಿಟಿಷರು ತಮ್ಮ 'ಒಡೆದು ಆಳುವ' ನೀತಿಯಿಂದ ದೇಶವನ್ನು,ದೇಶದ ಜನರನ್ನು,ಜಾತಿ,ಭಾಷೆ,ಇತ್ಯಾದಿಗಳ ಆಧಾರದ ಮೇಲೆ ಒಡೆಯುತ್ತಿದ್ದರು.ಸಾರ್ವಜನಿಕ ಸಭೆಗಳನ್ನು ನಡೆಸಲು ಬಿಡುತ್ತಿರಲಿಲ್ಲ.ಸಾರ್ವಜನಿಕ ಚರ್ಚೆಗಳಿಗೆ ಅವಕಾಶವಿರಲಿಲ್ಲ. ಅಂತ ಕ್ಲಿಷ್ಟಕರ ಸಮಯದಲ್ಲಿ ವಿಚಾರ ವಿನಿಮಯಕ್ಕೆ,ಸ್ವಾತಂತ್ರ್ಯ ಹೋರಾಟದ ಮುಂದಿನ ಬೆಳವಣಿಗೆಯ ಕುರಿತಾದ ವಿಚಾರಗಳನ್ನು ಹಂಚಿಕೊಳ್ಳಲು ವೇದಿಕೆಯು


ಅಂತಹ ಕಷ್ಟಕರ ಸಂದರ್ಭದಲ್ಲಿ ನಮ್ಮ ನೆರವಿಗೆ ಬಂದಿದ್ದು ಇದೆ ಗಣಪತಿ. ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಲೋಕಮಾನ್ಯ ಬಾಲಗಂಗಾಧರ ತಿಲಕರು ಗಣಪತಿಹಬ್ಬವನ್ನು ಮನೆಗಳಿಗೆ ಸೀಮಿತ ಮಾಡದೆ,ಅದನ್ನು ಸಾರ್ವಜನಿಕ ಆಚರಣೆಯನ್ನಾಗಿ ಮೊದಲು ಪುಣೆಯಲ್ಲಿ ಪ್ರಾರಂಭಿಸಿದರು. ಅಲ್ಲಿ ದೇಶಭಕ್ತರೆಲ್ಲರನ್ನು ಒಟ್ಟುಗೂಡಿಸುವ ಒಂದು ವೇದಿಕೆಯನ್ನಾಗಿ ಮಾಡಿದರು.

ವಿಶೇಷವಾಗಿ ಸಮಾಜದ ಎಲ್ಲಾವರ್ಗದ ಜನರನ್ನು ಒಟ್ಟುಗೂಡಿಸಿ,ರಾಜಕೀಯ ಚರ್ಚೆಗಳಿಗೆ,ಸಾರ್ವಜನಿಕ ಭಾಷಣ ಭಾಷಣಗಳಿಗೆ ವೇದಿಕೆಯನ್ನು ಒದಗಿಸಿತು. ಇದು ಬ್ರಿಟಿಷರ ಆಳ್ವಿಕೆಯ ವಿರುದ್ಧ ಪ್ರತಿಭಟಿಸಲು ಜನರನ್ನು ಪ್ರೂತ್ಸಾಹಿಸಿತು. ಯುವಕರನ್ನು ಸಂಘಟಿಸಿತು ಮತ್ತು ದೇಶಭಕ್ತಿಯ ಭಾವನೆಯನ್ನು ಮೂಡಿಸಿತು.

ಪುಣೆಯಲ್ಲಿ ಪ್ರಾರಂಭವಾದ ಈ ಗಣೇಶೋತ್ಸವವು ಶೀಘ್ರವಾಗಿ ಮಹಾರಾಷ್ಟ್ರದಾದ್ಯಂತ ಜನಪ್ರಿಯವಾಯಿತು.. ಇದೊಂದು ಧಾರ್ಮಿಕ ಆಚರಣೆಯಾದ್ದರಿಂದ ಬ್ರಿಟಿಷರಿಗೆ ತಡೆಯಲು ಅಸಾಧ್ಯವಾಯಿತು.ಅಂದಿನಿಂದ ಇಂದಿನವರೆಗೆ ಸಾರ್ವಜನಿಕ ಗಣೇಶೋತ್ಸವವು ದೇಶಾದ್ಯಂತ ಆಚರಿಸುತ್ತಾರೆ. ಹೀಗಾಗಿ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಣಪತಿಯ ಕೊಡುಗೆಯೂ ಇದೆ! ಈ ಆಲೋಚನೆ ಬಂದಂತಹ ತಿಲಕರನ್ನು ನಾವು ಎಂದೆಂದಿಗೂ ಮರೆಯುವಂತಿಲ್ಲ.

ದೇಶದೆಲ್ಲೆಡೆ ಇಂದಿಗೂ ಮನೆಗಳಲ್ಲಿ ,ಸಾರ್ವಜನಿಕ ಸ್ಥಳಗಳಲ್ಲಿ ಗಣಪತಿಯನ್ನು ಕೂಡಿಸಿ,ಪೂಜಿಸಿ ಮತ್ತೆ ವಿಸರ್ಜನೆಯ ದಿನ ಭಾರವಾದ ಮನಸ್ಸಿನಿಂದ,ಒದ್ದೆಯಾದ ಕಣ್ಣುಗಳಿಂದ ಭಾವನಾತ್ಮಕ ಬೀಳ್ಕೊಡುತ್ತಾರೆ.ಭಾರತೀಯರಿಗೆ ಗಣಪತಿಯೆಂದರೆ ಬರಿ ದೇವರಲ್ಲ,ಆಗಲೇ ಹೇಳಿದಂತೆ ಸ್ನೇಹಿತ,ಹಿರಿಯಣ್ಣ,ಮನೆಯ ಮಗನಿದ್ದಂತೆ. ಇದು ಭಾರತೀಯರ ವಿಶೇಷತೆ, ಈ ನೆಲದ ವೈಶಿಷ್ಟ್ಯತೆ.

**ಪ್ರೊ. ದತ್ತರಾಮ ಶ್ರೀವತ್ಸ, ವಾಣಿಜ್ಯ ವಿಭಾಗ.**




**ಪ್ರೊ. ಸತೀಶ್. ಎಂ.ಡಿ, ಆಂಗ್ಲಭಾಷಾ ಉಪನ್ಯಾಸಕರು.**

# ಕಿರೀಟವಿಲ್ಲದ ದೊರೆ

1968ರ ಸುಮಾರಿನಲ್ಲಿ ಕೊಡಗಿನ ಕಾಕನಕೋಟೆ ಅರಣ್ಯದಲ್ಲಿ ಸೆರೆ ಸಿಕ್ಕ ನಂತರ ಮಾವುತನ ಗರಡಿಯಲ್ಲಿ ಪಳಗಿದ ಇವನ ಮುಂದಾಳತ್ವದಲ್ಲಿ ಅನೇಕ ಪುಂಡ, ಕಾಡಾನೆಯನ್ನು ಸೆರೆಹಿಡಿದ ಕಾರಣಕ್ಕಾಗಿ ಅರಣ್ಯ ಇಲಾಖೆಯಲ್ಲಿ ವಿಶೇಷ ಸ್ಥಾನ ಗಳಿಸಿದ. ಇವನ ನಿಷ್ಠಾವಂತ ಗುಣ , ಸ್ವಭಾವ , ಧೈರ್ಯ ಎಲ್ಲವನು ಗಮನಿಸಿ ಅರಣ್ಯ ಇಲಾಖೆ ಮೈಸೂರ್ ದಸರಾದಲ್ಲಿ ಪಾಲ್ಗೊಳ್ಳಲು ತಿಳಿಸಿತು. ಸುಮಾರು 50 ವರ್ಷಗಳಿಗೂ ಹೆಚ್ಚು ಕಾಲ ಮೈಸೂರು ದಸರಾದಲ್ಲಿ ಸೇವೆ ಸಲ್ಲಿಸಿದ್ದ ಇವನು ಪ್ರಾರಂಭದಲ್ಲಿ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದ.

ಬಲರಾಮನ ನಿವೃತ್ತಿಯ ನಂತರ ಅಂಬಾರಿ ಹೊರುವ ಜವಾಬ್ದಾರಿ ಅರ್ಜುನನಿಗೆ ೨೦೧೨ರಲ್ಲಿ ದೊರಕಿತು. ೨೦೧೨ ರಿಂದ ೨೦೧೯ ರವರೆಗೆ ಎಂಟು ವರ್ಷಗಳ ಕಾಲ ಚಿನ್ನದ ಅಂಬಾರಿ ಹೊತ್ತು, ದಸರಾ ಮೆರವಣಿಗೆಯಲ್ಲಿ ಪ್ರಮುಖ ಆಕರ್ಷಣೆಯಾಗಿ ಮೆರೆದಿದ್ದ. ಅರ್ಜುನ ಅಂಬಾರಿ ಹೊರಲು ಆಯ್ಕೆಯಾಗಲು ಮುಖ್ಯ ಕಾರಣವೆಂದರೆ, ಅವನ ಬಲವಾದ ದೇಹ, ಸಹಿಷ್ಣುತೆ ಮತ್ತು ಗಾಂಭೀರ್ಯ. ದಸರಾ ಮೆರವಣಿಗೆಯ ಸಂದರ್ಭದಲ್ಲಿ ಸಾವಿರಾರು ಜನರ ಮಧ್ಯೆಯೂ ಶಾಂತಚಿತ್ತದಿಂದ ನಡೆದು, ಯಾವುದೇ ಗೊಂದಲಕ್ಕೆ ಅವಕಾಶ ನೀಡದೆ ಕರ್ತವ್ಯ ನಿರ್ವಹಿಸುವ ಅವನ ಸಾಮರ್ಥ್ಯ ಎಲ್ಲರಿಂದಲೂ ಮೆಚ್ಚುಗೆ ಗಳಿಸಿತ್ತು. ಆನೆಗಳಿಗೆ ಮದ ಬಂದಾಗ ಅತೀವ ಕೋಪಗೊಂಡು ನಿಯಂತ್ರಣಕೆ ಸಿಗದೇ ಮಾವುತ, ಸಾರ್ವಜನಿಕರ ಮೇಲೆ ದಾಳಿ ಮಾಡುವುದನ್ನು ಕೇಳಿರುತ್ತೇವೆ. ಆದರೆ ಅರ್ಜುನನ ಸ್ವಭಾವವೇ ಬೇರೆ, ಈತ ಮದ ಬಂದಾಗಲೂ ತನ್ನ ಸಂಯಮ ಕಳೆದು ಕೊಳ್ಳದೆ, ಶಾಂತಿಯಿಂದಿದುದ್ದನ್ನು ಕಂಡು ಸ್ವತಃ ಆನೆ ತಜ್ಞರೇ ಬೆರಗಾಗಿದ್ದರು. ಮದವಿದ್ದಾಗಲೂ ದಸರಾದಲ್ಲಿ ಪಾಲ್ಗೊಂಡ ಏಕೈಕ ಆನೆಯೆಂದರೆ ಅದು ಅರ್ಜುನ ಮಾತ್ರ.

ಮೈಸೂರು ದಸರಾ ಜಂಬೂ ಸವಾರಿಯಲ್ಲಿ ೭೫೦ ಕೆಜಿ ಚಿನ್ನದ ಅಂಬಾರಿ ಹೊರುವ ಮೂಲಕ ಪ್ರಸಿದ್ಧನಾಗಿದ್ದ ಅರ್ಜುನ ಆನೆ, ಕನ್ನಡಿಗರ ಹೃದಯದಲ್ಲಿ ವಿಶೇಷ ಸ್ಥಾನ ಗಳಿಸಿದ್ದ. ನಾಯಕನ ಪಟ್ಟಕ್ಕೆ ಏರಿ, ತನ್ನ ಗಾಂಭೀರ್ಯ, ದೈತ್ಯ ದೇಹ ಮತ್ತು ಶಾಂತ ಸ್ವಭಾವದಿಂದ ಎಲ್ಲರನ್ನೂ ಆಕರ್ಷಿಸಿದ್ದ ಅರ್ಜುನ,

ಕರ್ನಾಟಕದ ಸಂಸ್ಕೃತಿ ಮತ್ತು ದಸರಾದ ಒಂದು ಅವಿಭಾಜ್ಯ ಅಂಗವಾಗಿ "ದಸರಾ ರಾಜ" ಎಂದೇ ಪ್ರಖ್ಯಾತನಾದ.

ಡಿಸೆಂಬರ್ ೪ ೨೦೨೩ ರಂದು ಹಾಸನ ಜಿಲ್ಲೆಯ ಯಳಸೂರು ಅರಣ್ಯ ವಲಯದಲ್ಲಿ ಕಾಡಾನೆಗಳ ಕಾಳಗದಲ್ಲಿ ಅರ್ಜುನ ಎಂದಿನಂತೆ ಹೋರಾಟಕ್ಕಿಳಿದ. ತನ್ನೆದುರಿಗಿದ್ದ ಕಾಡಾನೆಯನ್ನು ದಂತದಿಂದ ತಿವಿದು, ಸೊಂಡಲಿನಿಂದ ದೂಡಿ ಇನ್ನೇನು ಕಾರ್ಯಾಚರಣೆ ಮುಗಿಸುವ ಹಂತದಲಿದ್ದ ಅರ್ಜುನನಿಗೆ ಒಮ್ಮೆಲೇ ಪೊದೆಯಿಂದ ಬಂದ ಆನೆ ಅರ್ಜುನನ ಹೊಟ್ಟೆಗೆ ತಿವಿದ ಕಾರಣ ಮೇಲಿದ್ದ ಮಾವುತ, ವೈದ್ಯರು ದಿಡೀರನೆ ಕೆಳಗೆ ಬಿದ್ದರು , ತೀವ್ರವಾಗಿ ರಕ್ತಸ್ರಾವವಾದರೂ ಹೋರಾಟ ಬಿಡದೆ ಕಾಡಾನೆಯನ್ನು ಓಡಿಸಿ, ನೆಲಕ್ಕೆ ಬಿದ್ದ ಅರ್ಜುನ ಮತ್ತೆ ಏಳಲಿಲ್ಲ.

ಅರ್ಜುನ ಕೇವಲ ಒಂದು ಆನೆಯಾಗಿರಲಿಲ್ಲ, ಅದು ಮೈಸೂರು ದಸರಾ ಸಂಸ್ಕೃತಿಯ ಪ್ರತೀಕವಾಗಿತ್ತು. ಅವನ ಸೇವೆ ಮತ್ತು ದಸರಾ ಮೆರವಣಿಗೆಯಲ್ಲಿನ ಅವನ ಗಾಂಭೀರ್ಯ ಕನ್ನಡಿಗರ ಮನಸ್ಸಿನಲ್ಲಿ ಎಂದೆಂದಿಗೂ ಉಳಿಯಲಿದೆ. ಅರ್ಜುನನಂತಹ ಗಜರಾಜರು ದಸರಾದ ವೈಭವವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದರು.

**ಪ್ರೊ. ದೀಕ್ಷಿತ್ ಯೋಗೇಶ್ , ಪ್ರಾಂಶುಪಾಲರು.**

# ನಂಬರಿನ ಹೋರಿ

ನಂಬರಿನ ಹೋರಿ ಎಂದರೆ ಈಗಿನ ಯುವ ಪೀಳಿಗೆಗೆ ಗೊತ್ತೇ ಆಗುವುದಿಲ್ಲ.ನಂಬರಿನ ಹೋರಿ ಎಂದರೆ ಅವುಗಳು ವಿಶಾಲವಾದ ಹುಲ್ಲುಗಾವಲಿನಲ್ಲಿ ಸ್ವಚ್ಛಂದವಾಗಿ ಬೆಳೆಯುತ್ತವೆ.ಅವುಗಳಿಗೆ ಯಾವುದೇ ಅಡೆತಡೆ ಕಡಿವಾಣ ಇರುವುದಿಲ್ಲ.ಅವು ತಮ್ಮ ತಾಯಿ ಹಾಲನ್ನು ಸಂಪೂರ್ಣವಾಗಿ ಕುಡಿದು ಬೆಳೆಯುತ್ತವೆ, ಮತ್ತು ವಿಶಾಲವಾದ ಹುಲ್ಲುಗಾವಲಿನಲ್ಲಿ ಎಲ್ಲಿ ಬೇಕಾದರೂ ಏನು ಬೇಕಾದರೂ ಮೇಯಬಹುದು.ಸುಮಾರು ಮೂವತ್ತು ವರ್ಷಗಳ ಹಿಂದೆ ನಮ್ಮ ಊರುಗಳಲ್ಲಿ ಈ ನಂಬರ್ ಹೋರಿಗಳನ್ನು ಸಾಕುವ ಪ್ರವೃತ್ತಿ ಇತ್ತು.ನಾವು ನಂಬರಿನ ಹೋರಿ ತರಬೇಕು ಎಂದರೆ ನಿರ್ದಿಷ್ಟ ದಿನಾಂಕದಂದು ಕಾವಲಿಗೆ ಹೋಗಿ ಹರಾಜಿನಲ್ಲಿ ಕೊಂಡು ತರಬೇಕಿತ್ತು.ನಾವು ತೋರಿಸಿದ ಹೋರಿ ಕರುಗಳನ್ನು ಅವರು ನಮಗೆ ಹಿಡಿದು ನಮಗೆ ಕೊಡುತ್ತಿದ್ದರು.ಅದಕ್ಕೆ ಸಾವಿರಗಳಲ್ಲಿ ನಾವು ದುಡ್ಡು ಕೊಡಬೇಕಿತ್ತು.ಅವುಗಳನ್ನು ತಂದ ನಂತರ ಹೋರಿಗಳನ್ನು ಸಾಕುವುದು ಅಂದರೆ ಪಳಗಿಸುವುದು ತುಂಬಾ ಸಾಹಸದ ಕೆಲಸವಾಗಿತ್ತು,ಕಾರಣ ಸ್ವಚ್ಛಂದವಾಗಿ ಕಾಡಿನಲ್ಲಿ ಓಡಾಡಿಕೊಂಡಿದ್ದ ಹೋರಿಗಳನ್ನು ಗೂಟಕ್ಕೆ ಕಟ್ಟಿ ಬೆಳೆಸುವುದು ದೊಡ್ಡ ಸವಾಲಿನ ಕೆಲಸವಾಗಿತ್ತು.ಅಲ್ಲದೆ ಆ ಹೋರಿಗಳಿಂದ ಉಳುಮೆ ಮಾಡುವುದು,ಗಾಡಿ ಎಳೆಸುವುದು ಇನ್ನೂ ಸಾಹಸದ ಕೆಲಸವಾಗಿತ್ತು.ಅವುಗಳಿಗೆ ತರಬೇತಿ ಕೊಡಲು ಸಾಕಿದ ಎತ್ತುಗಳ ಮೂಲಕ ಅವು ಮುಂದೆ ಈ ನಂಬರಿನ ಹೋರಿಗಳು ಹಿಂದೆ ಇರಬೇಕಿತ್ತು.ಎಷ್ಟೋ ವೇಳೆ ಮನೆಯವರನ್ನು ಗುದ್ದಿದ ,ಹಾಯ್ದ ,ತುಳಿದ ಸಂದರ್ಭಗಳು ಇವೆ.ಇಂತಹ ನಂಬರ್ ಹೋರಿಗಳಲ್ಲಿ ಎರಡು ವಿಧ, ಒಂದು ನಿಜವಾದ ನಂಬರ್ ಹೋರಿಗಳು ಕಾವಲಿನಲ್ಲಿ ಹರಾಜಿನಲ್ಲಿ ಕೊಂಡು ತರುವುದು ಇನ್ನೊಂದು ವಿಧ ಮನೆಯಲ್ಲಿ ಸಾಕಿ ನಂಬರ್ ಹಾಕಿದ ಹೋರಿಗಳು.ಕಾವಲಿನ ಹೋರಿ ಗಳಿಗೆ ತೊಡೆಯ ಎಡ ಭಾಗದಲ್ಲಿ ಅವು ಹುಟ್ಟಿದ ದಿನಾಂಕ ಮತ್ತು ವರ್ಷ ಹಾಕಿರುತ್ತಾರೆ.ಮನೆಯಲ್ಲಿ ಸಾಕಿದ ನಂಬರ್ ಹೋರಿಗಳಿಗೆ ಬಲ ಭಾಗದಲ್ಲಿ ಹುಟ್ಟಿದ ದಿನಾಂಕ ಮತ್ತು ವರ್ಷ ಹಾಕಿರುತ್ತಾರೆ.ನಾವು ಸುಮಾರು ನಲ್ವತ್ತು ವರ್ಷಗಳ ಹಿಂದೆ ಮನೆಯಲ್ಲಿ ಒಂದು ಜೊತೆ ಬಲ ಭಾಗದಲ್ಲಿ ನಂಬರ್ ಹಾಕಿರುವ ಹೋರಿಗಳನ್ನು ಮುನಿಯಪ್ಪ ಜಾತ್ರೆಯಲಿ ಕೊಂಡು ತಂದೆವು.ಅವುಗಳು ಬೇಗ ನಮಗೆ ಹೊಂದಿಕೊಂಡವು ನಮ್ಮೆಲ್ಲಾ ಕೆಲಸಗಳಿಗೆ ಅವು ಸಹಕಾರ ಕೊಡುತ್ತಿದ್ದವು . ಒಮ್ಮೆ ನಮ್ಮ ಮನೆಯಲ್ಲಿ ಕೆಲಸಕ್ಕಿದ್ದ ರಾಮಣ್ಣ ಹೊಲದಲ್ಲಿ ಉಳುಮೆ ಮಾಡುತ್ತಿದ್ದಾಗ ಒಂದು ಹೋರಿ ಆಕಸ್ಮಿಕವಾಗಿ ಗುಂಡಿಯಲ್ಲಿ ಬಿದ್ದು ಹೋಯಿತು.ಅವನು ಮನೆಯಲ್ಲಿ ಈ ವಿಷಯ ತಿಳಿಸಿದರೆ ಬೈಯುತ್ತಾರೆ ಹೊಡೆಯುತ್ತಾರೆ ಎಂದು ಬಿದ್ದ ಹೋರಿಯನ್ನು ಗುಂಡಿಯಲ್ಲಿ ಬಿಟ್ಟು ಮನೆಗೆ ಬಂದು ಬಟ್ಟೆ ತೆಗೆದುಕೊಂಡು ಹೋಗಿದ್ದ.ಆನಂತರ ಯಾರೋ ಬಂದು ನನಗೆ ಈ ವಿಷಯ ತಿಳಿಸಿದರು.ನಾವು ಹೊಲಕ್ಕೆ ಹೋಗಿ ಹೋರಿಯನ್ನು ನೋಡಿದಾಗ ಅದರ ಮುಂಗಾಲು ಮುರಿದು ಹೋಗಿತ್ತು.ಆನಂತರ ನಾವು ಹೋರಿಯನ್ನು ಮನೆಗೆ ತಂದು ಅದನ್ನು ಎತ್ತಿ ನಿಲ್ಲಿಸಿ ಪಶು ವೈದ್ಯರಿಂದ ಕಾಲು ಕಟ್ಟಿಸಿ ಸುಮಾರು ಮೂರು ತಿಂಗಳು ಮಗುವಿನ ರೀತಿಯಲ್ಲಿ ನೋಡಿಕೊಂಡೆವು.ಆದರೆ ನಮ್ಮ ನಂಬರ್ ಹೋರಿಯ ಕಾಲು ಸರಿ ಹೋಗಲಿಲ್ಲ.ಅದರ ಕಾಲಿನ ಮೂಳೆ ಹೊರ ಬಂದು ಹುಳ ಬಿದ್ದು ಅದು ಅಂತಿಮವಾಗಿ ತನ್ನ ಉಸಿರು ಬಿಟ್ಟಿತು.ಈ ಘಟನೆ ಯಾಕೆ ನೆನಪು ಬಂದಿತು ಎಂದರೆ ಇವತ್ತು ವಯಸ್ಸಾದ ತಂದೆ ತಾಯಿಗಳನ್ನು ಮನೆಯಲ್ಲಿ ಸಾಕಲು ಮಕ್ಕಳು ಸಿದ್ಧರಿಲ್ಲ, ಆದರೆ ನಾವು ನಲ್ವತ್ತು ವರ್ಷಗಳ ಹಿಂದೆ ಹೋರಿಯ ಕಾಲು ಕಟ್ಟಿಸಿ ಅದಕ್ಕೆ ಪ್ರತಿ ದಿನವೂ ಉಪಚರಿಸಿ ಕಾಲು ಸರಿಯಾಗುತ್ತದೆ ಎನ್ನುವ ಆಶಾಭಾವನೆ ಯಿಂದ ಮೂರು ತಿಂಗಳು ಕಾದೆವು.ಇವತ್ತಿನ ನಮ್ಮ ಮಕ್ಕಳಿಗೆ ಈ ವಿಷಯಗಳನ್ನು ನಂಬಲು ತಯಾರಿಲ್ಲ ಕಾಲ ಎಷ್ಟು ಬೇಗ ಮುಂದೆ ಹೋಯಿತು ಎನಿಸುತ್ತದೆ.ಅದೇ ಘಟನೆ ಈಗ ಸಂಭವಿಸಿದರೆ ಹೋರಿ ಹೊಲದಿಂದ ನೇರವಾಗಿ ಕಸಾಯಿಖಾನೆಗೆ ಹೋಗುತ್ತದೆ,ತೀರಿ ಹೋದ ಒಂದು ಗಂಟೆಯಲ್ಲಿ ಮಾಂಸದ ಮುದ್ದೆಯಾಗುತ್ತದೆ.ಮನುಷ್ಯ ವಿದ್ಯಾವಂತನಾದಷ್ಟು,ಆಧುನಿಕನಾದಷ್ಟು ಸ್ವಾರ್ಥಿ ಮತ್ತು ಕ್ರೂರಿ ಆಗುತ್ತಾನೆ ಎಂದು ಓದಿದ ನೆನಪು.

**ಪ್ರೊ. ಶಿವಾನಂದಸ್ವಾಮಿ, ರಾಜ್ಯಶಾಸ್ತ್ರ ಉಪನ್ಯಾಸಕರು.**